ಇ) ಸದರಿ ಕಾಮಗಾರಿಯು ಯಾವಾಗ ಪ್ರಾರಂಭವಾಗುವುದು ಮತ್ತು ಯಾವಾಗ ಪೂರ್ಣಗೊಳ್ಳುವುದು?

ಶ್ರೀ ಎಸ್. ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು) :-

ಅ)ಭಾರತೀಯ ರೈಲ್ವೆ ತಾಂತ್ರಿಕ ಮತ್ತು ಆರ್ಥಿಕ ಸ್ವಾಯತ್ತ (ರೈಟ್ಸ್) ಸಂಸ್ಥೆಯವರು ಈ ಕಾಮಗಾರಿಯ ಅಂದಾಜು ಪಟ್ಟಿಯನ್ನು ತಯಾರಿಸುತ್ತಿದ್ದಾರೆ.

ಆ)14 ಎಕರೆ 22 ಗುಂಟೆ.

ಇ) ಈ ಕಟ್ಟಡದ ಕಾಮಗಾರಿಯು ಡಿಸೆಂಬರ್ 94ರಲ್ಲಿ ಪ್ರಾರಂಭವಾಗುವುದೆಂದು ಮತ್ತು ಜೂನ್ 96ರ ಒಳಗಾಗಿ ಪೂರ್ಣಗೊಳಿಸಲಾಗುವುದೆಂದು ನಿರೀಕ್ಷಿಸಿದೆ.

ವಿಷಯ : ಬೆಳಗಾಂ ತಾಲ್ಲೂಕಿನ ಪ್ರಾಥಮಿಕ ಶಾಲೆಗಳಲ್ಲಿ ಮರಾಠಿ ಹಾಗು ಉರ್ದು ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 187 (696)

ಶ್ರೀ ಬಿ.ಐ. ಪಾಟೀಲ್ (ಉಚ್ಚಗಾಂವ್) :- ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ತಾಲ್ಲೂಕಿನಲ್ಲಿರುವ ಮರಾಠಿ ಮತ್ತು ಉರ್ದು ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ಖಾಲಿ ಹುದ್ದೆಗಳೇಷ್ಟು?

ಆ) ಅವುಗಳನ್ನು ಯಾವಾಗ ತುಂಬಲಾಗುವುದು?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):-

ಅ)ಪ್ರಸ್ತುತ ಮರಾಠಿ ಮತ್ತು ಉರ್ದು ಶಿಕ್ಷಕರ ಹುದ್ದೆಯು ಬೆಳಗಾಂ ತಾಲ್ಲೂಕಿನಲ್ಲಿ ಖಾಲಿ ಇರುವುದಿಲ್ಲ.

ಆ)ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ : ರಾಜ್ಯದಲ್ಲಿರುವ ಸ್ನಾತಕೋತ್ತರ ಪದವಿಗಳ ಸಂಖ್ಯೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 189 (775)

ಶ್ರೀ ಪಿ.ಜಿ. ಆರ್ ಸಿಂಧ್ಯ (ಕನಕಪುರ):- ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ)ರಾಜ್ಯದಲ್ಲಿರುವ ಸರ್ಕಾರಿ ಹಾಗೂ ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ದೊರಕುವ ಸ್ನಾತಕೋತ್ತರ ಪದವಿಗಳ ಒಟ್ಟು ಸಂಖ್ಯೆ ಎಷ್ಟು?

ಅ)ಇವುಗಳನ್ನು ಯಾವ ರೀತಿ ತುಂಬಲಾಗುವುದು?

ಶ್ರೀ . ಬಿ. ಶಿವಣ್ಣ (ವೈದ್ಯಕೀಯ ಶಿಕ್ಷಣ ಸಚಿವರು) :-

ಅ)ಕರ್ನಾಟಕ ರಾಜ್ಯದಲ್ಲಿ ಒಟ್ಟು ಸ್ನಾತಕೋತ್ತರ ಪದವಿಗಳ ಸಂಖ್ಯೆ (1993-94ನೇ ಸಾಲಿಗೆ) 1428. ಇವುಗಳಲ್ಲಿ ಸ್ನಾತಕೋತ್ತರ ಪದವಿ 772 ಹಾಗೂ ಸ್ನಾತಕೋತ್ತರ ಡಿಪ್ಲೊಮಾ 656.

ಆ)ಇವುಗಳಲ್ಲಿ ಸ್ನಾತಕೋತ್ತರ ಪದವಿಯು 772 ಸೀಟುಗಳನ್ನು ಭಾರತ ಸರ್ಕಾರದಿಂದಲೂ 201 ಸೀಟುಗಳನ್ನು ರಾಜ್ಯ ಸರ್ಕಾರ ನಡೆಸುವ ಪ್ರವೇಶ ಪರೀಕ್ಷೆಯಲ್ಲಿ ಪಡೆದ ಶ್ರೇಣಿಯ ಆಧಾರದ ಮೇಲೆ 89 ಸೀಟುಗಳನ್ನು ಸರ್ಕಾರದ ಸೇವಾ ನಿರತ ವೈದ್ಯರಿಂದ ತುಂಬಲಾಗುವುದು, ಹಾಗೂ ಉಳಿದ 418 ಸೀಟುಗಳನ್ನು ಆಡಳಿತ ಮಂಡಳಿಯವರಿಂದ ತುಂಬಲಾಗುವುದು.

ಸ್ನಾತಕೋತ್ತರ ಡಿಪ್ಲೊಮಾದಲ್ಲಿರುವ ಒಟ್ಟು 656 ಸೀಟುಗಳನ್ನು ಭಾರತ ಸರ್ಕಾರದಿಂದಲೂ, 212 ಸೀಟುಗಳನ್ನು ರಾಜ್ಯ ಸರ್ಕಾರ ನಡೆಸುವ ಪ್ರವೇಶ ಪರೀಕ್ಷೆಯಲ್ಲಿ ಪಡೆದ ಶ್ರೇಣಿಯ ಆಧಾರದ ಮೇಲೆ ಹಾಗೂ 95 ಸೀಟುಗಳನ್ನು ರಾಜ್ಯ ಸರ್ಕಾರದ ಸೇವಾ ನಿರತ ವೈದ್ಯರಿಂದಲೂ ತುಂಬಲಾಗುವುದು. ಉಳಿದ 280 ಸೀಟುಗಳನ್ನು ಆಡಳಿತ ಮಂಡಳಿಯವರಿಂದ ತುಂಬಲಾಗುವುದು.

ವಿಷಯ : ವಿಕ್ಟೋರಿಯ ಆಸ್ಪತ್ರೆಯಲ್ಲಿನ ನೆಫ್ರಾಲಜಿ ತಜ್ಞರುಗಳ ಸಂಖ್ಯೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 191 (693)

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳಿ):- ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಕ್ಟೋರಿಯಾ ಆಸ್ಪತ್ರೆಯಲ್ಲಿರುವ ನೆಫ್ರಾಲಜಿ ತಜ್ಞರ ಸಂಖ್ಯೆ ಎಷ್ಟು ?

ಆ) ಈ ವಿಭಾಗದಲ್ಲಿ ಹೊರ ರೋಗಿಗಳಿಗೆ ಯಾವ ದಿನಗಳಲ್ಲಿ ಎಷ್ಟು ಸಮಯ ಸಲಹೆ ನೀಡಲಾಗುತ್ತಿದೆ?

ಇ) ಈ ವಿಭಾಗದಲ್ಲಿ ನೆಫ್ರಾಲಜಿ ತಜ್ಞ ನಿಗಧಿತ ವೇಳೆಯಲ್ಲಿ ಹಾಜರಾಗದೆ ದೂರದ ಊರುಗಳಿಂದ ಬಂದ ಹೊರ ರೋಗಿಗಳು ಚಿಕಿತ್ಸೆ ಪಡೆಯದೇ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಈ) ದಿನಾಂಕ 27.7.94ರಲ್ಲಿ ಮತ್ತು 3.8.94ರಂದು ಈ ತಜ್ಞರ ಹೊರ ರೋಗಿಗಳ ಯೂನಿಟ್‌ನಲ್ಲಿ ಗೈರು ಹಾಜರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಈ ವಿಭಾಗದಲ್ಲಿ ಹೊರ ರೋಗಿಗಳಿಗೆ ವಾರಕ್ಕೊಮ್ಮೆ ಸಲಹೆ ನೀಡುತ್ತಿದ್ದು ಇನ್ನು ಮುಂದೆ ಪ್ರತಿದಿನ ಹೊರ ರೋಗಿಗಳ ವಿಭಾಗದಲ್ಲಿ ಸೇವೆ ಲಭ್ಯವಾಗುವಂತೆ ಏನು ಕ್ರಮಕೈಗೊಳ್ಳಲಾಗುವುದು?